


International Journal of Kannada Research
www.kannadajournal.com

ISSN: 2454–5813
IJKR 2019; 5(1): 97-100
© 2019 IJKR
www.kannadajournal.com
Received: 19-11-2018
Accepted: 20-12-2018

**Dr. Sanjeev R Nayak**
K.L.E. Institution, G.H.College
Haveri, Karnataka, India

**Correspondence**
**Dr. Sanjeev R Nayak**
K.L.E. Institution, G.H.College
Haveri, Karnataka, India

# ಆಧುನೀಕರಣದ ಪ್ರಭಾವದಲ್ಲಿ ಗ್ರಾಮದೇವತೆಗಳ ಸ್ಥಿತ್ಯಂತರ

**Dr. Sanjeev R Nayak**

### ಪೀಠಿಕೆ

ಗ್ರಾಮ ದೇವತೆಯ ಆರಾಧನೆ ಸ್ತ್ರೀ ಚೈತನ್ಯಶಕ್ತಿಯ ಆರಾಧನೆಯಾಗಿದೆ. ಇಷ್ಟೇ ಅಲ್ಲದೇ ಭೂಮಿ, ಪ್ರಾಣಿಗಳು, ಮರಗಿಡಗಳು, ನದಿಗಳು, ವೀರರು, ಪತಿವ್ರತೆಯರು, ಸಾಧುಸಂತರು, ಪಿತೃಗಳು, ಬಲಿಯಾದವರು, ಆತ್ಮಹತ್ಯೆ ಮಾಡಿಕೊಂಡವರು, ಉಪಕಾರ ಮಾಡಿದವರು, ಭೂತಪ್ರೇತಗಳು ಮಾಸ್ತಿಯಾದವರು, ಪಂಚಭೂತಗಳು, ಗ್ರಹನಕ್ಷತ್ರಗಳು ಹೀಗೆ ಈ ಎಲ್ಲಾ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಗ್ರಾಮ ದೇವತೆಯ ಅಸ್ತಿತ್ವವನ್ನು ಕಾಣಬಹುದು.

ವ್ಯಕ್ತಿ ಹಾಗೂ ಸಮಾಜದಲ್ಲಿ ಕಾಲದಿಂದ ಕಾಲಕ್ಕೆ ಹೀಗೆ ಅನೇಕ ಬದಲಾವಣೆಗಳು ನಡೆಯುತ್ತಿವೆ. ಇದು ಸಂಕ್ರಮಣದ ಲಕ್ಷಣವಾಗಿದೆ. ಸಂಕ್ರಮಣ ಎಂದರೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಪಾದಾರ್ಪಣೆ ಮಾಡುವುದಾಗಿದೆ.ಇಂದು ನಶಿಸಿ ಹೋಗುತ್ತಿರುವ ಗ್ರಾಮದೇವತೆಯ ಆಚರಣೆಗಳು, ಆಚಾರವಿಚಾರಗಳು, ನಂಬಿಕೆ, ಪುರಾಣ ಮತ್ತು ಸಂಪ್ರದಾಯಗಳ ಬೇರುಗಳನ್ನು ಆದಷ್ಟು ಜತನದಿಂದ ನೋಡಿಕೊಳ್ಳಬೇಕಾಗಿದೆ. ಆಧುನಿಕರಣದಿಂದ ನಶಿಸಿ ಹೋಗುತ್ತಿರುವ ನಮ್ಮ ಸಂಪ್ರದಾಯದ ಬೇರುಗಳನ್ನು ಅದರ ಗಟ್ಟಿತನದ ಸೊಗಡನ್ನು ತಿಳಿಸುವ, ಹಾಗೂ ಅದನ್ನು ಹಿಡಿದಿಡುವ ಪ್ರಯತ್ನಮಾಡಬೇಕಾಗಿದೆ.

ಅತ್ತ ನಾಗರೀಕತೆಗೆ ಒಗ್ಗಲಾರದೆ, ಇತ್ತ ಗ್ರಾಮೀಣ ಪರಿಸರವನ್ನು, ತ್ಯಜಿಸಲಾರದೆ ತಾಕಲಾಟದ ಭಾವಗಳಲ್ಲಿ ಕೂಡಿರುವ ಸಂಪ್ರದಾಯಗಳ ಒಳ-ಹೊರಗುಗಳ ಅರಿವು ಇಂದು ಅತ್ಯಾವಶ್ಯಕವಾದದ್ದು. ನಗರ ಪ್ರದೇಶದ ಆಧುನೀಕರಣದ ಆಕರ್ಷಣೆಯಿಂದ ಕಳೆದು ಹೋಗುತ್ತಿರುವ ಸಂಪ್ರದಾಯಗಳು, ಇಂದಿನ ಹಳ್ಳಿಗಳಲ್ಲೂ ಬಹುಶಃ ಕಡಮೆ ಪ್ರಮಾಣದಲ್ಲಿ ಕಾಣುತ್ತಿವೆ. ನಗರೀಕರಣದ ಪ್ರಭಾವ ಕೇವಲ ಪಟ್ಟಣಕ್ಕೆ ಸೀಮಿತವಾಗದೆ ಹಳ್ಳಿಗಳಿಗೂ ವ್ಯಾಪಿಸಿದ್ದು ಹಳ್ಳಿಗಳಲ್ಲಿ ಅಳಿದುಳಿದ ಆಚಾರ ವಿಚಾರಗಳೂ ಇಂದು ಅಸ್ಥಿರಗೊಳ್ಳುತ್ತಿವೆ.

ಆಧುನೀಕರಣ ಮತ್ತು ಗ್ರಾಮದೇವತೆಗಳ ಸ್ಥಿತ್ಯಂತರ

### ಆರ್ಯರ ಆಗಮನ

ಆರ್ಯರು ಭಾರತಕ್ಕೆ ಬರುವ ಮುನ್ನ ಭಾರತದಲ್ಲಿ ದ್ರಾವಿಡರು ನೆಲೆಸಿದ್ದು, ಇವರು ಮಾತೃದೇವತೆಯ ಆರಾಧಕರಾಗಿದ್ದರು. ಆರ್ಯರು ಬಂದ ನಂತರ ಮಾತೃದೇವತೆಯ ಆರಾಧನೆ ಹಿಂದೆ ಸರಿದು ಪಿತೃ ದೇವತೆಯ ಆರಾಧನೆ ಮುಂಚೂಣಿಗೆ ಬಂದಿತು. ಇಲ್ಲಿ ಗ್ರಾಮದೇವತೆಗಳು ತಮ್ಮ ಅಸ್ತಿತ್ವವನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡವು.

### ಹೊಸ ಧರ್ಮಗಳ ಉದಯ

ಭಾರತವು ಅನೇಕ ಧರ್ಮಗಳ ನೆಲೆಬೀಡು. ಇಲ್ಲಿ ಜೈನಧರ್ಮ, ಬೌದ್ಧಧರ್ಮ, ಶೈವಧರ್ಮ ಹಾಗೂ ವೈಷ್ಣವ ಧರ್ಮಗಳು ಅನೇಕ ವರ್ಷಗಳ ಕಾಲ ತಮ್ಮ ಅಸ್ತಿತ್ವವನ್ನು ಪಡೆದಿದ್ದವು. ಈ ಸಂದರ್ಭದಲ್ಲಿ ಗ್ರಾಮದೇವತೆಯನ್ನು ಪೂಜಿಸುತ್ತಿದ್ದ ಗ್ರಾಮೀಣರಲ್ಲಿ ಏನನ್ನು ಸ್ವೀಕರಿಸಬೇಕು ಏನನ್ನು ಬಿಡಬೇಕೆಂಬ ಸಂದಿಗ್ಧ ಉಂಟಾಗಿ ಗ್ರಾಮದೇವತೆಗಳು ಸ್ವಲ್ಪ ಮಟ್ಟಿನ ಅಸ್ತಿತ್ವವನ್ನು ಕಳೆದುಕೊಳ್ಳತೊಡಗಿದವು. ಸಾಮಾಜಿಕ ಮೇಲ್ಮನೆ ಮನೋಭಾವ ಸಮಾಜದಲ್ಲಿ ಇರುವದರಿಂದ ನಗರದ, ಶಿಷ್ಟರ ಅನುಕರಣೆ ಕೆಲವು ಮಟ್ಟಿಗೆ ಪ್ರಭಾವ ಬೀರಿರುವ ಸಾಧ್ಯತೆ ಇದೆ.

### ಹೊಸ ದೇವರುಗಳ ಉದಯ

ಅನೇಕ ವರ್ಷಗಳ ಹಿಂದಿನಿಂದ ನಡೆದುಕೊಂಡು ಬರುತ್ತಿರುವ ಗ್ರಾಮದೇವತೆಗಳ ಆಚರಣೆಗಳು ಹಾಗೂ ಗ್ರಾಮದೇವತೆಯ ಆರಾಧನೆಯು ಕೆಲವು ಹೊಸ ದೇವರುಗಳ ಉದಯದಿಂದ ಸ್ವಲ್ಪಮಟ್ಟಿನ ಬದಲಾವಣೆಗೆ ಒಳಗಾಗಿವೆ. ಸಾಯಿಬಾಬಾ, ಶಬರಿಮಲೆ ಅಯ್ಯಪ್ಪ, ಮಂತ್ರಾಲಯದ ರಾಘವೇಂದ್ರ, ತಿರುಪತಿ ವೆಂಕಟರಮಣ, ಧರ್ಮಸ್ಥಳಮಂಜುನಾಥ, ಕೈವಾರ ತಾತಯ್ಯ, ಮಂಟೇಸ್ವಾಮಿ, ಮಲೆಮಹದೇಶ್ವರ ದೇವತೆಗಳ ಜೊತೆಗೆ ಕಲ್ಕಿ ಭಗವಾನ್, ಅಮ್ಮ, ಓಂಶಕ್ತಿ ಹೀಗೆ ಇತ್ತೀಚೆಗೆ ಅನೇಕ ಹೊಸ ದೇವರುಗಳ ಉದಯ, ಪೂಜಾವಿಧಾನ ಮತ್ತು ಆಚರಣೆಗಳು ಗ್ರಾಮದೇವತೆಯ ಮೇಲೆ ಪರಿಣಾಮ ಬೀರುತ್ತಿವೆ.

**ಮಾನವ ಪೂಜೆ**
ಇತ್ತೀಚೆಗೆ ಹೆಚ್ಚಾಗಿರುವ ಒಂದು ಪೂಜಾ ವಿಧಾನವೇ ಈ ಮಾನವ ಪ್ರಜೆ. ದೇವರಿಗೆ ಮಾನವನಂತೆ ಎಲ್ಲಾ ಹೋಲಿಸುವ ಪ್ರತೀತಿ ಈ ಹಿಂದೆ ಗ್ರಾಮದೇವತೆಗಳಲ್ಲಿ ಹೆಚ್ಚಾಗಿತ್ತು. ಈಗಲೂ ಅದು ಇದೆ. ಅಂದರೆ ಗ್ರಾಮದೇವತೆಗಳಿಗೆ ಗಂಡ, ಅತ್ತೆ, ಮಕ್ಕಳು ಮುಂತಾದ ಹೋಲಿಕೆಗಳನ್ನು ಮಾಡುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ ಮಾರಮ್ಮನ ಕಥೆ. ಇದಲ್ಲದೆ ಶಿಷ್ಟ ದೇವನಾದ ಶ್ರೀರಾಮ ಮಾನವನಾಗಿಯೇ ಕಷ್ಟನಷ್ಟಗಳನ್ನು ಸಹಿಸಿ ದೇವರ ಎತ್ತರಕ್ಕೆ ಏರಿದನೆಂಬುದಕ್ಕೆ ಅನುಮಾನವಿಲ್ಲ. ಹಾಗೆಯೇ ದೇವರಸ್ಥಾನದಲ್ಲಿ ಜಗದ್ಗುರುಗಳನ್ನು ಮಠಾಧಿಪತಿಗಳನ್ನು, ಸನ್ಯಾಸಿಗಳನ್ನು ಪೂಜಿಸುವ ರೂಢಿ ಇತ್ತೀಚೆಗೆ ಹೆಚ್ಚಾಗಿದೆ. ಇದರೊಂದಿಗೆ ಹೊಸದಾಗಿ ಉದ್ಭವಿಸಿರುವ ಕಲ್ಕಿ ಭಗವಾನ್ ಮತ್ತು ಅಮ್ಮ ಇಂತಹ ವ್ಯಕ್ತಿಗಳು ದೇವರ ಎತ್ತರಕ್ಕೆ ಏರುತ್ತಿರುವುದನ್ನು ಕಾಣಬಹುದಾಗಿದೆ. ಗ್ರಾಮದೇವತೆಯ ಅಸ್ತಿತ್ವ ಬದಲಾಗಲು ಇವೂ ಸಹ ಸ್ವಲ್ಪ ಮಟ್ಟಿಗೆ ಕಾರಣವಾಗಿವೆ.

**ಧಾರ್ಮಿಕ ಶ್ರದ್ಧೆ ಕಳೆದುಕೊಳ್ಳುತ್ತಿರುವುದು**
ಆಧುನೀಕರಣದ ಪ್ರಭಾವದಿಂದ ನಮ್ಮ ಪೂರ್ವಿಕರು ಆಚರಿಸುತ್ತಿದ್ದ ಅನೇಕ ಆಚಾರ ವಿಚಾರಗಳು ಇಂದು ಬುಡಮೇಲಾಗುತ್ತಿದೆ. ಸಮಾಜದಲ್ಲಿ ನೈತಿಕತೆ ಮತ್ತು ಒಳಿತಿನ ಉಳಿವಿಗಾಗಿ ಹಿರಿಯರು ರೂಪಿಸಿದ ನಿಯಮಗಳು ಮತ್ತು ಆಚರಣೆಗಳು ಇಂದು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆ ಕಾರಣ ಇತ್ತೀಚಿನ ಪೀಳಿಗೆ ಸ್ವಲ್ಪಮಟ್ಟಿನ ಧಾರ್ಮಿಕ ಶ್ರದ್ಧೆಯನ್ನು ಕಳೆದುಕೊಳ್ಳುತ್ತಿರುವುದಾಗಿದೆ. ಇದಕ್ಕೆ ನಾನಾ ಕಾರಣಗಳನ್ನು ಗುರುತಿಸಬಹುದು. ಇಂದಿನ ಆಧುನಿಕತೆಯ ವೇಗಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿರುವ ಯುವಪೀಳಿಗೆ ಸಮಾಜದ ರೀತಿ, ನೀತಿ, ಸಂಪ್ರದಾಯಗಳನ್ನು ಯಾವುದೇ ಕಾರಣಕ್ಕೂ ಕಳೆದುಕೊಳ್ಳಬಯಸುವುದಿಲ್ಲ. ದೇವರು, ಧರ್ಮ, ಆಚಾರಗಳು ಒಂದು ಹಂತದವರೆಗೆ ಸ್ವಲ್ಪ ಮಟ್ಟಿಗೆ ಸರಿ ಎಂದು ತಿಳಿದು ಅದನ್ನು ನಡೆಸಿಕೊಂಡು ಬರುತ್ತಾರೆ. ಹಾಗೆಂದ ಮಾತ್ರಕ್ಕೆ ಮರೆತಿದ್ದಾರೆಂದಲ್ಲ, ತಮ್ಮ ಶಕ್ತ್ಯಾನುಸಾರ ದೇವರ ಸೇವೆಗೆ ತಮ್ಮನ್ನು ತೊಡಗಿಸಿಕೊಂಡು, ಅನಂತರ ಇಂದಿನ ವಾಸ್ತವ ಬದುಕಿನೆಡೆಗೆ ಮುಖ ಮಾಡುತ್ತಾರೆ.
ಇವರು ಕೆಲವೊಮ್ಮೆ ಧಾರ್ಮಿಕ ಶ್ರದ್ಧೆಯನ್ನು ಕಳೆದುಕೊಳ್ಳುವುದೂ ಉಂಟು. ಈ ಹಿನ್ನೆಲೆಯಲ್ಲಿ ಇಂದು ಮೌಲ್ಯಗಳ ಘರ್ಷಣೆಗೆ ಒಳಗಾಗುತ್ತಿದ್ದಾರೆ. ಇವರ ಬದುಕು ಸಂಕೀರ್ಣದತ್ತ ಹೆಜ್ಜೆ ಹಾಕುತ್ತಿದೆ. ಇದು ಎಲ್ಲಾ ಕಾಲದಲ್ಲೂ ಇತ್ತು.

**ಗ್ರಾಮೀಣರಲ್ಲಿ ಹೆಚ್ಚಾಗಿರುವ ವ್ಯಾವಹಾರಿಕ ಜ್ಞಾನ**
ಒಂದು ಕಾಲಕ್ಕೆ ಮುಗ್ಧರಾಗಿದ್ದ ಗ್ರಾಮೀಣರು ಎಲ್ಲಾ ಸಮಸ್ಯೆಗಳನ್ನು ನಿವಾರಿಸುವುದು ಗ್ರಾಮದೇವತೆಯೆಂದು ನಂಬಿ ನಡೆದುಕೊಳ್ಳುತ್ತಿದ್ದರು. ಇವರಲ್ಲಿ ವ್ಯಾವಹಾರಿಕ ಜ್ಞಾನ ಹೆಚ್ಚಿದಂದಿನಿಂದ ಎಲ್ಲವನ್ನು ವೈಜ್ಞಾನಿಕ ವಿಧಾನಗಳಿಗೆ ಅಳವಡಿಸಿ ನೋಡುವ ಪ್ರವೃತ್ತಿ ಬೆಳೆದಿದೆ. ಒಂದು ಕಾಲದಲ್ಲಿ ದನಗಳಿಗೆ ಸಪ್ಪೆರೋಗ ಬಂದರೆ ದೇವಾಲಯಕ್ಕೆ ಹೋಗಿ ಹರಕೆ ಹೊತ್ತು ದೀಪಗಳನ್ನು ಬೆಳಗುತ್ತಿದ್ದ ಗ್ರಾಮೀಣರು ಇಂದು ಪಶು ವೈದ್ಯಕೀಯ ಆಸ್ಪತ್ರೆಗೆ ಹೋಗುವುದನ್ನು ಕಾಣಬಹುದು. ಇಂದಿನ ಜಗತ್ತಿನಲ್ಲಿ ವ್ಯಾವಹಾರಿಕ ಜ್ಞಾನ ಅತ್ಯಗತ್ಯ. ಇದು ಕೇವಲ ವ್ಯವಹಾರಿಕ ಜ್ಞಾನ ಅಥವಾ ಶಿಕ್ಷಣದ ಮೂಲಕ ಪ್ರಾಪ್ತವಾದ ಸಾಮಾಜಿಕ ಎಚ್ಚರವಾಗಿರದೆ ಬೇರೆಬೇರೆ ಮಾಧ್ಯಮಗಳು ಮೂಡಿಸುತ್ತಿರುವ ಎಚ್ಚರಗಳೂ ಆಗಿವೆ. ಆದರೆ ದೇವರನ್ನು ಈ ಚೌಕಟ್ಟಿಗೆ ತರುವುದು ಅಷ್ಟೊಂದು ಸಮಂಜಸವಲ್ಲ.

**ಸಂಸ್ಕೃತೀಕರಣಕ್ಕೆ ಒಳಗಾಗುವುದು**
ಗ್ರಾಮದೇವತೆ ಸಾಮಾಜಿಕ ಬದಲಾವಣೆಗೆ ಒಳಗಾಗುತ್ತಿವೆ. ಇತ್ತೀಚೆಗೆ ವೈದಿಕರ ಸಂಪರ್ಕದಿಂದಾಗಿ ಗ್ರಾಮದೇವತೆಗಳಲ್ಲಿ ಅನೇಕ ಬದಲಾವಣೆಗಳು ಕಂಡುಬರುತ್ತಿವೆ. ಒಂದು ರೀತಿಯಲ್ಲಿ ಇವು ಸಂಸ್ಕೃತೀಕರಣ ಹೊಂದುತ್ತಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಗ್ರಾಮದೇವತೆಗಳು ಭಕ್ತರ ಕೋರಿಕೆಗಳನ್ನು ಸಕಾಲದಲ್ಲಿ ಈಡೇರಿಸದಿದ್ದರೆ ಆ ವಿಷಯದಲ್ಲಿ ಅವು ಸೋತರೆ ಬೆಲೆಯನ್ನು ಕಳೆದುಕೊಂಡು ಹೇಳ ಹೆಸರಿಲ್ಲದಂತಾಗುತ್ತದೆ. ಒಂದು ಪಕ್ಷಗೆದ್ದರೆ, ಜನಪ್ರಿಯತೆಗಳಿಸಿದರೆ ಯಾವುದೇ ಪ್ರಸಿದ್ಧ ದೇವತೆಯ ಅವತಾರವಾಗಿ ಬಿಡುತ್ತಾರೆ. ಜನಪದ ದೇವತೆಗಳ ಸಂಸ್ಕೃತೀಕರಣಕ್ಕೆ ಇದೂ ಒಂದು ಕಾರಣವೆನ್ನಬಹುದು. ಶಿಷ್ಟ ಸಂಪ್ರದಾಯಗಳಿಗೆ ವಿರುದ್ಧವಾಗಿದ್ದ ಗ್ರಾಮದೇವತೆಯ ಸಂಪ್ರದಾಯಗಳಿಗೆ ಸಹಜವಾಗಿ ಯಾರು ಹೆಚ್ಚಿನ ಭಕ್ತಿಗೌರವ ತೋರಿಸಿ ನಡೆದುಕೊಳ್ಳಬೇಕಾಗಿತ್ತೋ ಅವರೇ ಈ ದೇವತೆಯನ್ನು ಮರೆಯುತ್ತಿರುವುದೂ ಈ ಸಂಸ್ಕೃತೀಕರಣಕ್ಕೆ ಒಂದು ಕಾರಣ, ಶಿಷ್ಟರು ನಡೆಸುವ ಪೂಜಾವಿಧಾನದಂತೆ ಗ್ರಾಮದೇವತೆಗೂ ಪೂಜಾ ವಿಧಾನದಲ್ಲಿ ಮಂತ್ರಘೋಷಗಳು ಪ್ರಾರಂಭವಾಗಿ ಜನಪದ ಅರ್ಚನಾ ವಿಧಾನವೇ ಕ್ಷುಲ್ಲಕರವಾಗಿದೆ. ಪ್ರಸಾದ ವಿನಿಯೋಗ ಮುಂತಾದವುಗಳಲ್ಲೂ ಕೆಲವೆಡೆ ಬದಲಾವಣೆಗಳು ಕಂಡುಬರುತ್ತಿದೆ. ಇವೆಲ್ಲವೂ ಸಂಸ್ಕೃತೀಕರಣದ ಪ್ರಭಾವಗಳೇ ಆಗಿವೆ. ಸಮಾಜದಲ್ಲಿನ ಈ ಬದಲಾವಣೆಗೆ ಮೇಲ್ಮುಖಚಲನೆ ಎಂದು ಕರೆಯುತ್ತಾರೆ.

**ಶಿಷ್ಟದೇವರ ಹೋಲಿಕೆ ನೀಡುವುದು**
ಶಿಷ್ಟದೇವರ ಹೋಲಿಕೆ ಗ್ರಾಮದೇವತೆಗಳೊಂದಿಗೆ ನಡೆಯುತ್ತಿರುವುದರ ಜೊತೆಗೆ ಗ್ರಾಮದೇವತೆಗಳು ಸಂಸ್ಕೃತೀಕರಣಕ್ಕೆ ಒಳಗಾಗಿ ತಮ್ಮ ಇರುವಿಕೆಯನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ಇದರಂತೆ ಶಿಷ್ಟ ದೇವರ ಹೋಲಿಕೆಗಳನ್ನು ಆರೋಪಿಸುವುದೂ ಕೆಲವು ಸಂದರ್ಭಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ "ಸಪ್ತ ಮಾತೃಕೆಯರಾದ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ನಾರಸಿಂಹಿ ಮತ್ತು ಇಂದ್ರಿ ದೇವತೆಗಳು ಕ್ರಮವಾಗಿ ಬ್ರಹ್ಮ, ಈಶ್ವರ, ಕುಮಾರ (ಸ್ಕಂದ) ವಿಷ್ಣು, ವರಾಹ, ನರಸಿಂಹ ಮತ್ತು ಇಚಿದ್ರನ ಶಕ್ತಿಗಳೆಂದು ಹೇಳುವಾಗ ಇವರು ಶಿಷ್ಟದೇವರುಗಳು ಅರಿಸುವಂತೆ ಆಭರಣಗಳನ್ನು ಧರಿಸಿ ಹಾಗೂ ಆಯುಧಗಳನ್ನು ಕೈಯಲ್ಲಿ ಹಿಡಿದು, ಶಿಷ್ಟ ದೇವರು ಬಳಸುವ ವಾಹನಗಳನ್ನು ಏರಿ ಸಂಚರಿಸುತ್ತಾರೆಂದು ಹೋಲಿಕೆಗಳನ್ನು ನೀಡುತ್ತಾರೆ. ಇಲ್ಲಿ ಗ್ರಾಮದೇವತೆ ತನ್ನ ಸ್ವರೂಪ ಕಳೆದುಕೊಳ್ಳುವುದನ್ನು ಕಾಣಬಹುದು.

**ಜನಾಂಗದ ಹಿನ್ನೆಲೆಯಲ್ಲಿ ದೇವರ ಅಸ್ತಿತ್ವ**
ಒಂದು ಗ್ರಾಮದಲ್ಲಿ ನೆಲೆಸಿರುವ ಜನಾಂಗದ ಹಿನ್ನೆಲೆಯಲ್ಲಿ ಅಲ್ಲಿನ ಗ್ರಾಮದೇವತೆಯನ್ನು ಬಹುಮಟ್ಟಿಗೆ ಗುರುತಿಸಬಹುದು. ಒಂದು ಗ್ರಾಮದಲ್ಲಿ ಯಾವ ಜನಾಂಗದವರ ಜನಸಂಖ್ಯೆ ಹೆಚ್ಚಾಗಿರುತ್ತದೆಯೋ ಅಂತಹ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಜನಾಂಗದ ಕುಲದೈವವೇ ಗ್ರಾಮದೇವತೆಯಾಗಿರುತ್ತದೆ. ಇಲ್ಲಿ ಗ್ರಾಮದೇವತೆಯ ಸ್ಥಾನವನ್ನು ಶಿಷ್ಟ ದೇವರು ಕ್ರಮಿಸಿಕೊಂಡರೂ ಆತನಿಗೆ ಗ್ರಾಮದೇವಿಗೆ ನಡೆಸುವಂತೆ ದೀಪಗಳು, ಅಗ್ನಿಕೊಂಡ, ಮತ್ತು ಉತ್ಸವಗಳನ್ನು ನಡೆಸಲಾಗುತ್ತದೆ. ಹೀಗೆ ಗ್ರಾಮದೇವತೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾಳೆ. ಇಲ್ಲಿ ಜನಾಂಗದ ಪ್ರಾಬಲ್ಯವನ್ನು ಕಾಣಬಹುದು.

**ಅನ್ಯನಾಗರೀಕತೆಯ ಪ್ರಭಾವ**
ಅನ್ಯನಾಗರೀಕತೆಯ ಪ್ರಭಾವದಿಂದ ಗ್ರಾಮೀಣರು ತಮ್ಮ ದೇವಿಗೆ ಈ ಹಿಂದೆ ನಡೆದುಕೊಳ್ಳುವಚಿತೆ ನಡೆದುಕೊಳ್ಳದೆ ಇರುವುದು ಗಮನಾರ್ಹವಾದ ವಿಷಯವಾಗಿದೆ. ಇಲ್ಲಿ ಬಹುಪಾಲು ಅನ್ಯನಾಗರೀಕತೆ ಪ್ರಭಾವ ಸ್ಥಳೀಯ ಬದುಕಿನ ಮೇಲೆ ತನ್ನ ಪರಿಣಾಮವನ್ನು ಬೀರುತ್ತಿದೆ. ಹೀಗೆ ಪರದೇಶದ ನಾಗರೀಕತೆಗೆ ಒಳಗಾದ ವ್ಯಕ್ತಿಗಳು ತಮ್ಮ ಸಂಸ್ಕೃತಿಯನ್ನು ಅಷ್ಟಾಗಿ ಅನುಸರಿಸದಿರುವುದೂ ಒಂದು ಕಾರಣವಾಗಿ ದೇವತೆ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿದ್ದಾಳೆ.

**ಕೆಳವರ್ಗ ತಿರಸ್ಕಾರಕ್ಕೆ ಒಳಗಾದುದು**
ಮೇಲ್ವರ್ಗದಿಂದ ಕೆಳವರ್ಗದವರು ತಿರಸ್ಕಾರಕ್ಕೆ ಒಳಗಾದುದು ಬಹುಪಾಲು ಕೆಳವರ್ಗದ ದೇವತೆಗಳೂ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಲು ಕಾರಣವಾಯಿತು. ಮೇಲ್ವರ್ಗದವರು ಪೂಜಿಸುವ ದೇವರು ಶ್ರೇಷ್ಠವೆಂದು ಕೆಳವರ್ಗದವರು ಪೂಜಿಸುವ ದೇವರು ಕೀಳೆಂದು ಭಾವಿಸಿದ್ದೇ ಇದಕ್ಕೆ ಕಾರಣವಾಗಿದೆ. ಆದರೆ ಕೆಳವರ್ಗದ ದೇವರು ಮೇಲ್ವರ್ಗದ ದೇವರಿಗಾಗಿ

ಪೂಜೆಗೊಳ್ಳುತ್ತಿರುವುದನ್ನು ತರಗಳ್ಳಿಯಲ್ಲಿ ಕಾಣಬಹುದು.

**ಅನುಕರಣೆಗೆ ಒಳಗಾದುದು**

ಅನುಕರಣೆ ಒಂದು ಸಾರ್ವಕಾಲಿಕ ಸತ್ಯ, ಎಲ್ಲಾ ಕಾಲದಲ್ಲೂ ಮಾನವ ಅನುಕರಣೆಗೆ ಒಳಗಾಗುತ್ತಲೇ ಬಂದಿದ್ದಾನೆ. ಅನೇಕ ವರ್ಷಗಳಿಂದ ಕೆಳವರ್ಗದವರು ಮೇಲ್ವರ್ಗದವರ ಸಾಮಾಜಿಕ ಹಾಗೂ ಧಾರ್ಮಿಕ ವಿಧಿಗಳನ್ನು ಅನುಕರಿಸಲು ಪ್ರಾರಂಭಿಸಿ ತಮ್ಮ ಆಚರಣೆಗಳನ್ನು ಹಾಗೂ ಸಂಪ್ರದಾಯಗಳನ್ನು ಸ್ವಲ್ಪಮಟ್ಟಿಗೆ ಕೈಬಿಟ್ಟಿದ್ದು ಗಮನಾರ್ಹವಾದ ಬದಲಾವಣೆಯಾಗಿದೆ. ಹೀಗೆ ತಿಳಿದೋ ಇಲ್ಲವೇ ತಿಳಿಯದೆ ಗ್ರಾಮೀಣರು ತಮ್ಮ ರೂಢಿಗತ ಜೀವನದಲ್ಲಿ ಪರಿಣಾಮಕಾರಿಯಾದ ಬದಲಾವಣೆಯನ್ನು ಕಂಡುಕೊಂಡಿದ್ದು ಗ್ರಾಮ ದೇವತೆಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿತು.

**ಸರಿಯಾದ ವ್ಯವಸ್ಥೆ ಇಲ್ಲದಿರುವುದು**

ಕೆಲವು ಹಳ್ಳಿಗಳಲ್ಲಿ ದೇವಿಗೆ ಸೇವೆಯನ್ನು ನಡೆಸಲು ಸರಿಯಾದ ಸೌಲಭ್ಯಗಳ ಕೊರತೆ ಇರುವುದೂ ಕಾರಣವಾಗಿದೆ. ಅಂದರೆ ಹಳ್ಳಿಗಳು ಪಟ್ಟಣ ಪ್ರದೇಶದಿಂದ ಬಹಳ ದೂರವಿದ್ದಾಗ ಅಲ್ಲಿಗೆ ಸಂಚಾರಿ ವ್ಯವಸ್ಥೆ ಇಲ್ಲವೇ ನೀರಿನ ವ್ಯವಸ್ಥೆ ಇಲ್ಲದೆ ಇರುವುದು, ಮೂಲಭೂತ ಸೌಕರ್ಯಗಳಿಲ್ಲದಿದ್ದಾಗ ಮಾನವ ಚಿಂತೆಗೊಳಗಾಗಿ, ಅವನ ಸೌಕರ್ಯಗಳಿಗೆ ತಕ್ಕಂತೆ ಅವನು ದೇವರ ಸೇವೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಾನೆ. ಉದಾಹರಣೆಗೆ ಮೊದಲು ವಾರಕ್ಕೊಮ್ಮೆ ಕಷ್ಟಪಟ್ಟು ನಡೆಸುತ್ತಿದ್ದ ಪೂಜೆ ಅನಂತರ ತಿಂಗಳಿಗೆ ಹೋಗಬಹುದು. ಇಲ್ಲವೆ ವರ್ಷಕ್ಕೊಮ್ಮೆ ನಡೆಸಲ್ಪಡುತ್ತಿದ್ದ ಜಾತ್ರೆ ಐದು ವರ್ಷಗಳಿಗೆ ಒಮ್ಮೆ ನಡೆಯಬಹುದು. ಹೀಗೆ ಮುಂದೂಡಲ್ಪಟ್ಟ ಆಚರಣೆಗಳು ಕಾಲ ಕಳೆದಂತೆ ನಡೆಯದೇ ಹೋಗುವುದೂ ಉಂಟು. ಕೆಲವೊಮ್ಮೆ ವೈಯಕ್ತಿಕ ಕಾರಣಗಳಿಗೆ ಜಾತ್ರೆ ಮುಂದೂಡಲ್ಪಡುತ್ತದೆ. ಕೆಲವೊಮ್ಮೆ ನಿಗದಿತ ಸಮಯಕ್ಕೂ ಮುನ್ನ ನೆರವೇರುತ್ತದೆ.

**ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳದೆ ಇರುವುದು**

ಬಹುಪಾಲು ಗ್ರಾಮದೇವತೆಯನ್ನು ಪೂಜಿಸುವ ಪುರೋಹಿತರು ತಮ್ಮನ್ನು ತಾವು ಕೇವಲ ಪೂಜೆಗಾಗಿಯೇ ಸೀಮಿತಗೊಳಿಸಿಕೊಳ್ಳದೆ ಇತರ ಉದ್ಯೋಗಗಳಲ್ಲಿ ತೊಡಗಿರುವುದನ್ನು ಕಾಣಬಹುದು. ಪೂರ್ಣವಾಗಿ ಗ್ರಾಮದೇವತೆ ಪ್ರಜೆ ಪುನಸ್ಕಾರಗಳನ್ನು ಅವಲಂಬಿಸದೆ ಪುರೋಹಿತರು ವ್ಯವಸಾಯ ಇತರ ಕೆಲಸಗಳಲ್ಲಿ ತೊಡಗಿರುವುದನ್ನು ಅನೇಕ ಹಳ್ಳಿಗಳಲ್ಲಿ ಕಾಣಬಹುದು. ಗ್ರಾಮದೇವತೆಗೆ ನಡೆದುಕೊಳ್ಳುವ ಜನ ಕಡಿಮೆಯಾದ್ದರಿಂದ ಪ್ರಜಾರಿಗಳಿಗೆ ಪೂರ್ಣ ಪ್ರಮಾಣದ ಕಾರ್ಯವಿರುವುದಿಲ್ಲ, ಆದ್ದರಿಂದ ಇತರ ಉದ್ಯೋಗ ಅನಿವಾರ್ಯ, ಹಾಗಾಗಿ ಇವರು ಜೀವನೋಪಾಯಕ್ಕೆ ಬೇರೆ ಮಾರ್ಗವನ್ನು ಹಿಡಿಯುವ್ವದರಿಂದ ಗ್ರಾಮದೇವತೆಗಳು ಅಷ್ಟಾಗಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

**ಮೂಢನಂಬಿಕೆಗೆ ಒಳಗಾಗುವುದು**

ಇಂದಿನ ಆಧುನಿಕ ಸಂದರ್ಭದಲ್ಲಿ ಯಾವುದೇ ವಿಷಯವಾದರೂ ಅದನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡುವ ಜಾಗೃತ ಮನಸ್ಸು ಹಳ್ಳಿಗರಲ್ಲಿದೆ. ಇದಕ್ಕೆ ಗ್ರಾಮದೇವತೆ ಹಾಗೂ ಆಚರಣೆಗಳೂ ಹೊರತಲ್ಲ, ಕೊಂಡ ಹಾಯುವುದು, ಬಾಯಿಬೀಗ, ಸಿಡಿಯಂತಹ ಕೆಲವು ಆಚರಣೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸುವುದು ಇಂದು ಅನೇಕ ಹಳ್ಳಿಗಳಲ್ಲಿ ಕಾಣಬಹುದು. ಇದಕ್ಕೆ ಅನೇಕ ಕಾರಣಗಳಿವೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಭಾರತೀಯ ವಿಜ್ಞಾನ ಮಂದಿರ, ಭಾರತ ಜನಜ್ಞಾನ ವಿಜ್ಞಾನ ಸಮಿತಿ, ಮುಂತಾದವುಗಳ ಮೂಲಕ ಡಾ. ಎಚ್. ನರಸಿಂಹಯ್ಯ, ಡಾ. ಸಿ. ಆರ್. ಚಂದ್ರಶೇಖರ್, ಡಾ. ಗೋಪಾಲ ದಾಬಡೆ, ಡಾ. ಪ್ರಕಾಶ್ ಸಿ. ರಾ ವ್., ಡಾ. ಎಸ್.ಜೆ. ನಾಗಲೋಟಿ ಮಠ, ನರೇಂದ್ರ ನಾಯಕ್ ಮತ್ತಿತರ ವ್ಯಕ್ತಿಗಳು ಗ್ರಾಮೀಣ ಪ್ರದೇಶದಲ್ಲಿ ಹಳ್ಳಿಯ ಜನರ ಜಾಗೃತಿಗಾಗಿ ನಡೆಸಿದ ಪವಾಡ ರಹಸ್ಯ ಬಯಲು, ಭಾನಾಮತಿ, ಪರಿಸರ ಸಂರಕ್ಷಣೆ, ಸ್ತ್ರೀ ಸಾಕ್ಷರತೆಯಂಥ ಕಾರ್ಯಕ್ರಮಗಳು ಜನರ ಮೇಲೆ ಒಳ್ಳೆಯ ಪರಿಣಾಮ ಬೀರಿವೆ. ಹೊಸಕೋಟೆಯಲ್ಲಿ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮ ಹಾಗೂ ಇದರ ಮುಂದುವರಿದ ಯೋಜನೆಗಳು ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ನಿರಂತರ ಪರಿಶ್ರಮವಹಿಸಿವೆ. ಹೀಗಾಗಿ ಬಾಯಿಬೀಗ, ಸಿಡಿ, ಮುಂತಾದ ಆಚರಣೆಗಳಲ್ಲಿ, ಬಳಸುವ ಪರಿಕರಗಳನ್ನು ಜನ ಪರೀಕ್ಷಿಸಿ ನೋಡುತ್ತಾರೆ. ಹೀಗೆ ಕೆಲವು ಸಾರಿ ಆಚರಣೆಗಳೊಂದಿಗೆ ಗ್ರಾಮದೇವತೆಯನ್ನು ಒರೆಹಚ್ಚಿ ನೋಡುವುದುಂಟು. ಅಲ್ಲದೆ ಗ್ರಾಮದೇವತೆ ಬಗ್ಗೆ ಹಳ್ಳಿಗರಿಗೆ ಹೆಚ್ಚಿನ ಸಲಿಗೆಯೂ ಉಂಟು, ಹೀಗೆ ಗ್ರಾಮದೇವತೆಯ ಬಗ್ಗೆ ಗ್ರಾಮೀಣರು ಕೆಲವು ಬಾರಿ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಬೆತ್ತಲೆಸೇವೆ ಮತ್ತು ಬಲಿಯಂತಹ ಆಚರಣೆಗಳು ಕೆಲವು ಸಾರಿ ಮೂಢನಂಬಿಕೆಯಿಂದ ನಡೆಸುವ ಆಚರಣೆಗಳೆಂದು ಗ್ರಾಮದೇವಿಯ ಸೇವೆಯನ್ನೇ ನಿಲ್ಲಿಸುವುದನ್ನು ಕಾಣಬಹುದು.

**ನಿಷೇಧಕ್ಕೆ ಒಳಗಾಗಿರುವುದು**

ಕೆಲವು ಆಚರಣೆಗಳು ನಿಷೇಧಕ್ಕೆ ಒಳಗಾಗಿರುವುದೂ ಒಂದು ಕಾರಣವಾಗಿದೆ. ಹಳ್ಳಿಗರು ಗ್ರಾಮದೇವತೆಯ ಸೇವೆಯನ್ನು ನಡೆಸುವುದನ್ನು ಬಿಟ್ಟು ಬೇರೆ ದೇವರ ಸೇವೆಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಕಾರಣ ಬಲಿ, ಮದ್ಯಸೇವನೆ, ಬೆತ್ತಲೆಸೇವೆ, ಬೆತ್ತಲೆನೃತ್ಯ, ತಾಂತ್ರಿಕ, ವಾಮಾಚಾರದಂತಹ ಆಚರಣೆಗಳು ನಿಷೇಧಕ್ಕೆ ಒಳಪಟ್ಟಿರುವುದೇ ಆಗಿದೆ. ಇದರೊಂದಿಗೆ ಗ್ರಾಮದೇವತೆಗೆ ಸಂಬಂಧಿಸಿದಂತೆ ಅನೇಕ ವಿಧಿ-ನಿಷೇಧಗಳು ಇರುವ್ವದರಿಂದ ಅವುಗಳನ್ನು ಪಾಲಿಸಿಕೊಂಡು ಸೇವೆ ನಡೆಸುವುದು ಕಷ್ಟಸಾಧ್ಯವಾಗಿರುವುದೇ ಕಾರಣ ಇತ್ತೀಚೆಗೆ ಸ್ವಲ್ಪಮಟ್ಟಿಗೆ ಗ್ರಾಮದೇವತೆಗಳು ತಮ್ಮ ಪ್ರಾಬಲ್ಯ ಕಳೆದುಕೊಳ್ಳುತ್ತಿರುವ್ವದಂತೆ ಭಾಸವಾಗುತ್ತದೆ.

**ನಗರೀಕರಣ**

ಭಾರತ ಹಳ್ಳಿಗಳ ದೇಶ, ಅನೇಕ ವರ್ಷಗಳಿಂದ ಈ ಹಳ್ಳಿಗಳು ಪಟ್ಟಣ ಪ್ರದೇಶದೊಳಗೆ ಸೇರಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವುದಲ್ಲದೆ, ನಗರ ಪ್ರದೇಶದ ಒಡನಾಟದಿಂದ ತಮ್ಮ ಸಂಪ್ರದಾಯ ಹಾಗೂ ಸಾಂಸ್ಕೃತಿಕ ಪರಂಪರೆಯಲ್ಲೂ ಕೆಲವು ವ್ಯತ್ಯಾಸಗಳನ್ನು ಕಂಡುಕೊಳ್ಳುತ್ತಿವೆ. ಅನೇಕ ಹಳ್ಳಿಗಳು ನಗರದ ಆಡಂಬರಕ್ಕೆ ಒಳಗಾಗಿ ತಮ್ಮ ಮೂಲ ಸ್ವರೂಪದಲ್ಲೇ ಬದಲಾವಣೆಯನ್ನು ಪಡೆದುಕೊಳ್ಳುತ್ತಿವೆ. ಹೀಗೆ ಗ್ರಾಮಗಳು ನಗರೀಕರಣಕ್ಕೆ ಒಳಗಾಗುತ್ತಿರುವ್ವದರಿಂದ ನಗರದ ಹೊಸ ಪಂಥ, ಹೊಸ ದೇವರುಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಿವೆ. ಹಾಗಾಗಿ ಗ್ರಾಮದೇವತೆಗಳ ಅಸ್ತಿತ್ವದಲ್ಲಿ ಗಮನಾರ್ಹವಾದ ಬದಲಾವಣೆಗಳು ಕಾಣುತ್ತಿವೆ.

**ಗ್ರಾಮಗಳು ಇರುವಿಕೆಯನ್ನು ಕಳೆದುಕೊಳ್ಳುತ್ತಿವೆ**

ನಗರ ಪ್ರದೇಶದೊಳಗೆ ಗ್ರಾಮಗಳು ಸೇರಿಕೊಳ್ಳುತ್ತಿರುವುದರೊಂದಿಗೆ ಅನೇಕ ಸ್ಥಳಗಳಲ್ಲಿ ತಮ್ಮ ಇರುವಿಕೆಯನ್ನು ಕಳೆದುಕೊಳ್ಳುತ್ತಿವೆ. ನಗರದ ಕಡೆಗೆ ಇಲ್ಲವೆ ಸ್ವದೇಶದ ಇತರ ಪಟ್ಟಣಗಳ ಕಡೆಗೆ ಮತ್ತು ಹೊರ ರಾಷ್ಟ್ರಗಳ ಕಡೆಗೆ ಜನರು ವಲಸೆ ಹೋಗುತ್ತಿರುವುದೂ ಮತ್ತೊಂದು ಕಾರಣ. ಕೆಲವೊಮ್ಮೆ ಉದ್ಯೋಗವೂ ಕಾರಣವಾಗಿದೆ. ಹೀಗೆ ಇರುವಿಕೆಯನ್ನು ಕಳೆದುಕೊಂಡಾಗ ಅಲ್ಲಿನ ಆಚಾರ ವಿಚಾರಗಳೊಂದಿಗೆ ದೇವರು ಸಹಾ ಇಲ್ಲದಾಗುತ್ತದೆ.

**ದ್ವಂದ್ವ ನಡವಳಿಕೆ**

ಕೆಲವು ಕಾರಣಗಳಿಗಾಗಿ ಗ್ರಾಮೀಣರು ತಮ್ಮ ಹಳೆಯ ಸಂಪ್ರದಾಯಗಳನ್ನು ಬಿಡಲೂ ಆಗದೆ ಇತ್ತ ಹೊಸ ಸಂಪ್ರದಾಯಗಳನ್ನು ಸ್ವೀಕರಿಸಲೂ ಆಗದೆ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿದ್ದಾರೆ. ಕೆಲವು ಸಂದರ್ಭಗಳಲ್ಲಿ ನಿಧಾನವಾಗಿ ಹೊಸವಿಧಾನಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸಿದರೂ ಹಳೆಯ ಆಚಾರಗಳು ಅವರನ್ನು ಬಿಟ್ಟು ಕೊಡುವುದಿಲ್ಲ, ಕೆಲವು ಬಾರಿ ಹಳೆಯದು ಹೆಚ್ಚೆಂದರೆ ಮತ್ತೆ ಕೆಲವು ಬಾರಿ ಹೊಸದಕ್ಕೆ ಆಕರ್ಷಿತರಾಗುತ್ತಾರೆ. ಅಲ್ಲದೆ ಕೆಲವು ಆಚಾರಗಳ ಬಗ್ಗೆ ಜನಪದರಲ್ಲಿ ಕಾಡುತ್ತಿರುವ ಸಂಕುಚಿತ ಭಾವ ಅವರ ದ್ವಂದ್ವ ನಡವಳಿಕೆಗೆ ಕಾರಣವಾಗಬಹುದು.

**ಪರಸಂಸ್ಕೃತಿಯ ಪ್ರಭಾವ**

ಗ್ರಾಮೀಣರು ಪರದೇಶದ ನಾಗರೀಕತೆಯ ಪ್ರಭಾವಕ್ಕೆ ಒಳಗಾಗಿ ತಮ್ಮ

ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ಆಧುನಿಕ ಪ್ರಪಂಚದಲ್ಲಿ ಜೀವನಕ್ಕೆ ಚೈತನ್ಯವನ್ನು ಕೊಡುವ ಅಂಶಗಳನ್ನು ಬಿಟ್ಟು ಪರ ಸಂಸ್ಕೃತಿಯ ಪ್ರವಾಹದಲ್ಲಿ ತೇಲಿಹೋಗುತ್ತಿರುವ ಇಂದಿನ ಸಂದರ್ಭದಲ್ಲಿ ಜಾನಪದ ಸಂಸ್ಕೃತಿಯ ಉಳಿವು ಪ್ರಶ್ನೆಯಾಗಿದೆ. ಪರಸಂಸ್ಕೃತಿಯ ಪ್ರಭಾವದಿಂದ ದೂರ ಉಳಿದು ತಮ್ಮ ಪ್ರಾಬಲ್ಯವನ್ನು ರಚಿಸುವಲ್ಲಿ ಗ್ರಾಮ ದೇವತೆಗಳು ಹಾಗೂ ಇವುಗಳ ಆಚರಣೆಗಳು ಪ್ರಮುಖವಾದ ಪಾತ್ರ ವಹಿಸಬೇಕು. ಆದರೆ ಪರಸಂಸ್ಕೃತಿಯ ಪ್ರಭಾವದಿಂದ ರಕ್ತಗತವಾದ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಗ್ರಾಮೀಣರು ಇನ್ನೂ ಹೆಚ್ಚಾಗಿ ಮಾಡಬೇಕಾಗಿದೆ.

**ಭಕ್ತಿಯ ಪಲಾಯನವಾಗುವಿಕೆ**

ಆಧುನಿಕ ಯುಗಕ್ಕೆ ತಕ್ಕಂತೆ ಹೆಜ್ಜೆಯನ್ನು ಹಾಕುತ್ತಿರುವ ಮಾನವ ತನ್ನ ಮೂಲಭೂತ ಸೌಕರ್ಯಗಳಿಂದ ಹಿಡಿದು ನಂಬಿಕೆ, ಆಚಾರ ವಿಚಾರಗಳಿಗೆ ತನಗೆ ಬೇಕೆನಿಸಿದಂತೆ ಬದಲಾವಣೆಯನ್ನು ಮಾಡಿಕೊಳ್ಳುತ್ತಿದ್ದಾನೆ. ಇದಕ್ಕೆ ಭಕ್ತಿಯೂ ಹೊರತಾಗಿಲ್ಲ. ಬಹುತೇಕ ಗಂಟೆಗಟ್ಟಲೆ ಕುಳಿತು ಪೂಜೆಯನ್ನು ಸಲ್ಲಿಸುತ್ತಿದ್ದ ಮಾನವ ಇಂದಿನ ಯುಗಧರ್ಮಕ್ಕೆ ತಕ್ಕಂತೆ ದೇವರಿಗೆ ಸೇವೆಯನ್ನು ಸಲ್ಲಿಸುವ ವಿಧಾನವನ್ನು ಬದಲಾಯಿಸಿಕೊಂಡಿದ್ದಾನೆ. ತನಗೆ ಬೇಕೆನಿಸಿದಾಗ ದೇವರಿಗೆ ಪ್ರಜೆ ಸಲ್ಲಿಸುವ, ತನ್ನ ಇಚ್ಛೆಗಳು ಫಲಿಸದಿದ್ದರೆ ಪಲಾಯನಗೈಯುವ ನಡವಳಿಕೆಯಿಂದ ಇಂದು ಗ್ರಾಮದೇವತೆ ತನ್ನ ಪ್ರಾಮುಖ್ಯ.

**ಸಾಮಾಜಿಕ ಸಮಗ್ರತೆ ಕಳೆದುಕೊಳ್ಳುತ್ತಿರುವುದು**

ಹಿಂದಿನ ಕಾಲದಲ್ಲಿ ಗ್ರಾಮಗಳಲ್ಲಿ ಗುಡಿಯು ಸಾಮಾಜಿಕ ಸಮಗ್ರತೆಯ ಸಂಕೇತವಾಗಿತ್ತು. ಗುಡಿಯಲ್ಲಿ ಜರುಗುವ ಜಾತ್ರೆ, ನೇಮ, ದರ್ಶನ, ನ್ಯಾಯನಿರ್ಣಯಗಳು ಗ್ರಾಮಜೀವನದ ಕೊಂಡಿಗಳನ್ನು ಬೆಸೆಯುತ್ತಿದ್ದವು. ಇಂಥ ಸಂದರ್ಭಗಳಲ್ಲಿ ಗ್ರಾಮದ ಪ್ರಮುಖರು ಹಾಗೂ ಅನೇಕ ಪಂಗಡಗಳ ಹಿರಿಯರು ಅಲ್ಲಿ ಹಾಜರಿದ್ದು ಗುಡಿಯ ಸಾಮಾಜಿಕ ಮಹತ್ವವನ್ನು ಹೆಚ್ಚಿಸುತ್ತಿದ್ದರು. ಈಗ ಧಾರ್ಮಿಕ ದೃಷ್ಟಿಯಲ್ಲಿ ಮಾತ್ರವಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ ದೃಷ್ಟಿಗಳಲ್ಲೂ ಪ್ರಾಚೀನ ಗ್ರಾಮೀಣ ವ್ಯವಸ್ಥೆಗಳು ಇರುವಿಕೆ ಕಳೆದುಕೊಂಡಿವೆ. ಹೀಗೆ ಗ್ರಾಮದ ಕಟ್ಟುಪಾಡುಗಳು ಇರುವಿಕೆ ಕಳೆದುಕೊಂಡಾಗ ಗ್ರಾಮವನ್ನು ಪ್ರತಿನಿಧಿಸುವ ಗ್ರಾಮದೇವತೆಗಳು ಪೂಜೆಗೊಳ್ಳದೇ ಇದ್ದರೆ ಆಶ್ಚರ್ಯವಿಲ್ಲ.

**ಗ್ರಾಮದೇವತೆಯ ವ್ಯಾಪ್ತಿ ಸಂಕುಚಿತಗೊಳ್ಳುತ್ತಿರುವುದು**

ಈ ಹಿಂದೆ ಗ್ರಾಮದೇವತೆಗಳು ತಮ್ಮ ಗುಡಿಯೊಳಗೆ ಮಾತ್ರವಲ್ಲ, ಹೊರಗೂ ತಮ್ಮ ಪ್ರಭಾವವನ್ನು ಬೀರಿ ಮನ್ನಣೆಯನ್ನು ಗಳಿಸಿದ್ದವು. ಒಂದು ಗ್ರಾಮದೇವತೆಯ ಜಾತ್ರೆ ಎಂದರೆ ಸುತ್ತಮುತ್ತಲ ಹತ್ತು ಹಳ್ಳಿಗಳಷ್ಟೇ ಅಲ್ಲ ಹೊರ ರಾಜ್ಯ, ಮತ್ತು ಹೊರ ರಾಷ್ಟ್ರಗಳಿಂದಲೂ ಕೆಲವು ಭಕ್ತರು ಬಂದು ಪೂಜೆ ಸಲ್ಲಿಸಿ ಹೋಗುತ್ತಿದ್ದರು. ಹನ್ನೆಂದು ದಿನ ಇಲ್ಲವೆ ಏಳು ದಿನ ನಡೆಯುತ್ತಿದ್ದ ಜಾತ್ರೆಗಳು ಇತ್ತೀಚೆಗೆ ಒಂದು ದಿನಕ್ಕೆ ಸೀಮಿತವಾಗಿವೆ. ಒಂದೇ ದಿನದಲ್ಲಿ ನಡೆಸಬೇಕಾದ ಎಲ್ಲಾ ಆಚರಣೆಗಳೂ ನಡೆದು ಹೋಗಿ ಮರುದಿನ ಯಥಾ ಪ್ರಕಾರ ಹಳ್ಳಿಗರು ತಮ್ಮ ತಮ್ಮ ಉದ್ಯೋಗ, ವಿದ್ಯಾಭ್ಯಾಸ ಮುಂತಾದವುಗಳಲ್ಲಿ ತೊಡಗುವುದನ್ನು ಕಾಣಬಹುದು. ಇದಕ್ಕೆ ಇಂದಿನ ಜೀವನದಲ್ಲಿ ಆಗಿರುವ ಬದಲಾವಣೆಗಳೊಂದಿಗೆ ಆರ್ಥಿಕ ತೊಡಕುಗಳೂ ಕಾರಣವೆನ್ನಬಹುದು. ಈ ಎಲ್ಲಾ ಕಾರಣಗಳಿಗಾಗಿ ಗ್ರಾಮದೇವತೆಯ ವ್ಯಾಪ್ತಿ ಸಂಕುಚಿತ ಗೊಳ್ಳುತ್ತಿದ್ದು ಅವು ತಮ್ಮ ಗ್ರಾಮದ ಗಡಿಯೊಳಗೆ ಮಾತ್ರ ಮನ್ನಣೆಯನ್ನು ಪಡೆದಿವೆ.

**ಗ್ರಾಮದೇವತೆಗಳು ಸ್ಥಳೀಯ ಮೂಲದವು, ಇವುಗಳಿಗೆ ಭಾಷೆ ಮತ್ತು ನಾಗರೀಕತೆ ತಿಳಿದಿಲ್ಲ**

ಗ್ರಾಮದೇವತೆಗಳಿಗೆ ದೇವ ಭಾಷೆಯಾದ ಸಂಸ್ಕೃತದ ಬಗ್ಗೆ ವಿಶೇಷವಾದ ಮಮತೆ ಇದ್ದ ಹಾಗೆ ಕಾಣುವುದಿಲ್ಲ. ಭಕ್ತರು ಮಾತನಾಡುವ ಭಾಷೆಯಲ್ಲೇ ಅಂದರೆ ಸ್ಥಳೀಯ ಭಾಷೆಯಲ್ಲೇ ಅವು ತಮ್ಮ ವ್ಯವಹಾರವನ್ನು ನಡೆಸುತ್ತವೆ. ತಮಿಳು, ತಲುಗು, ಕನ್ನಡದಂಥ ಭಾಷೆಯೇ ಇರಲಿ, ಹಾಗೂ ತುಳು, ಕೊಂಕಣಿ, ಗೊಂಡಿ ತೊದವ ಮೊದಲಾದ ಆಡುಮಾತು ಅಥವಾ ಬುಡಕಟ್ಟು ಭಾಷಷೆಗಳಾದರೂ ಭಕ್ತರ ಭಾಷೆಯಲ್ಲೇ ವ್ಯವಹರಿಸುತ್ತಾರೆ. ಇವುಗಳಿಗೆ ನಾಗರೀಕತೆಯ ಅರಿವಿಲ್ಲ.

**ಗ್ರಾಮದೇವತೆಯ ಪ್ರಖ್ಯಾತಿಯೇ ಅವಳ ಕುಂಠಿತಕ್ಕೆ ಕಾರಣವಾಗಿರುವುದು**

ಗ್ರಾಮದೇವತೆಗಳು ಮಹತ್ವ ಕಳೆದುಕೊಳ್ಳುತ್ತಿರುವುದರಲ್ಲಿ ಇನ್ನೊಂದು ಅಂಶ ಅಡಕವಾಗಿದೆ. ಯಾವುದೇ ಗ್ರಾಮದೇವತೆ ಪ್ರಸಿದ್ಧಳಾದಳೆಂದರೆ ಆಕೆಗೆ ಸುತ್ತ ಮುತ್ತಲಿನ ಗ್ರಾಮಗಳ ಭಕ್ತರು ನಡೆದುಕೊಳ್ಳುತ್ತಾರೆ. ಅನೇಕರನ್ನು ಆಕರ್ಷಿಸುವ ಇವಳ ಜಾತ್ರೆ ದೊಡ್ಡ ಪ್ರಮಾಣದ ಉತ್ಸವವಾಗಿ ಪುರಾಣ, ಪುರೋಹಿತ ವರ್ಗ, ಕಟ್ಟಡಗಳ ನಿರ್ಮಾಣ ಮುಂತಾದ ವ್ಯವಸ್ಥೆಗಳನ್ನು ಒಳಗೊಳ್ಳುವಲ್ಲಿ ಯಶಸ್ವಿಯಾಗುತ್ತದೆ. ಕ್ರಮೇಣ ಗ್ರಾಮದೇವತೆ, ಶಿಷ್ಟ ದೇವತೆಗಳ ಸಾಲಿಗೆ ಸೇರುತ್ತಾಳೆ. ಮುಂದೆ ಅವಳು ಕೇವಲ ಗ್ರಾಮದೇವತೆಯಾಗಿ ಉಳಿಯುವುದಿಲ್ಲ. ಮಹಾಶಕ್ತಿ ದೇವತೆಯೊಬ್ಬಳ ಅವತಾರ ಎನಿಸಿಕೊಳ್ಳುತ್ತಾಳೆ. ಹೀಗೆ ಶಿಷ್ಟರ ಸಾಲಿಗೆ ಸೇರ್ಪಡೆಯಾಗುವ ಗ್ರಾಮದೇವತೆಯ ಪ್ರಖ್ಯಾತಿಯೇ ಅವಳ ಕುಂಠಿತಕ್ಕೆ ಕಾರಣವಾಗುತ್ತದೆ.

**ಗುಡಿಗೋಪುರಗಳಿಲ್ಲದಿರುವುದು**

ಗ್ರಾಮದೇವತೆಗಳ ಗುಡಿಗಳು ಸಾಮಾನ್ಯವಾಗಿ ಊರ ಗಡಿಭಾಗದ ಹತ್ತಿರವಿರುತ್ತದೆ. ಅನೇಕ ಸಂದರ್ಭದಲ್ಲಿ ಈ ದೇವತೆಗಳೇ ಊರ ಗಡಿ ರಕ್ಷಕ ದೇವತೆಗಳೆನಿಸಿಕೊಳ್ಳುತ್ತಾರೆ. ಈಕೆಯ ಗುಡಿಗಳಲ್ಲಿ ಕೆಲವು ಮಾತ್ರ ಶಿಷ್ಟ ದೇವರುಗಳ ಗುಡಿಗಳಚಿತೆ ಶಿಲ್ಪ ಸೌಂದರ್ಯದಿಂದ ಕೂಡಿದ್ದು ಓರಣವಾಗಿರುತ್ತದೆ.

**ಸಮಾರೋಪ**

ಅನೇಕ ನಾಗರೀಕತೆಗಳ ಪ್ರಭಾವಕ್ಕೆ ಒಳಗಾಗುತ್ತಿರುವ ಭಾರತೀಯ ಜಾನಪದ ಪರಂಪರೆ ಇಂದು ತನ್ನ ಅಸ್ತಿತ್ವವನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಳ್ಳುತ್ತಿದೆ ಎಂಬುದು ಸರ್ವರೂ ಒಪ್ಪುವ ವಿಚಾರವಾಗಿದೆ. ಈ ಹಿನ್ನಲೆಯಲ್ಲಿ ಇಂದು ಶಿಷ್ಟ ಸಂಪ್ರದಾಯಗಳಿಂದ ಗ್ರಾಮದೇವತೆಯ ಆಚರಣೆಗಳು ಚಲನಶೀಲತೆಯನ್ನು ಪಡೆದುಕೊಳ್ಳುತ್ತಿದೆ. ಇವು ಸದಾ ಸ್ಥಿತ್ಯಂತರಗೊಳ್ಳುತ್ತಲೇ ಬರುತ್ತಿವೆ. ಹೀಗೆ ಜಾನಪದ ಮೌಖಿಕವಾಗಿ ಕೆಲಕಾಲ ಉಳಿದು ಜನಮನದಲ್ಲಿ ಹೆಪ್ಪುಗಟ್ಟಿ ಅನಂತರ ಸಂಸ್ಕೃತಿಯಾಗಿ, ಜೀವದ್ರವದೊಂದಿಗೆ ಸೇರಿಕೊಂಡು, ನಿರಂತರ ಜನಸಮುದಾಯದಲ್ಲಿ ಪ್ರವಹಿಸುತ್ತಲಿದೆಯೋ ಹಾಗೆ, ಗ್ರಾಮದೇವತೆಗಳು ಹಾಗೂ ಅದಕ್ಕೆ ಸಂಬಂಧಿಸಿದ ಆಚರಣೆಗಳು ತಲೆತಲಾಂತರದಿಂದ ಜನರ ಬದುಕನ್ನು ರೂಪಿಸುತ್ತಿವೆ. ಈ ಆಚರಣೆಗಳ ಅನೇಕ ಮಜಲುಗಳನ್ನು ಸೆರೆ ಹಿಡಿಯಬಹುದಾದರೂ ಅದರ ಆಳವನ್ನು, ಸಹಬಾಳ್ವೆಯನ್ನು, ಮತ್ತು ಮನೋಧರ್ಮವನ್ನು ಸೆರೆಹಿಡಿಯುವುದು ಕಠಿಣವಾದುದು. ಇಲ್ಲಿ ನ್ಯಾಯ, ನೀತಿ, ಬಂಧುತ್ವ, ಪ್ರಮಾಣಿಕತೆ, ಸಹಕಾರ, ಪ್ರೀತಿ ವಿಶ್ವಾಸಗಳು ಬದುಕಿನ ಮೂಲ ಸೂತ್ರಗಳಾಗಿವೆ. ಹೀಗೆ ಗ್ರಾಮದೇವತೆ ಮತ್ತು ಅದಕ್ಕೆ ಸಂಬಂಧಿಸಿದ ಆಚರಣೆಗಳು ಮಾನವ ಜನಾಂಗವನ್ನು ಒಂದು ತಾಯಿಬೇರಿಗೆ, ಸೇರಿಸುವ ಪ್ರಯತ್ನ ನಡೆಸುತ್ತಿವೆ. ಜನಪದ ಕಲೆ ಮತ್ತು ಸಾಹಿತ್ಯಗಳು ಈ ನಿಟ್ಟಿನಲ್ಲಿ ಸಹಕಾರಿಯಾಗಬಲ್ಲವು. ಮನುಷ್ಯ ಆಹಾರ, ಆವಾಸ, ವೇಷ, ಬಣ್ಣಗಳಲ್ಲಿ ಬೇರೆ ಬೇರೆಯಾಗಿ ಕಂಡರೂ ಅವನ ಆಚಾರ ವಿಚಾರಗಳಿಗೆ ಅರ್ಥ ಒಂದೇ. ವ್ಯಕ್ತಿಗೆ ದೇಶ, ಧರ್ಮ, ಜಾತಿ ಪ್ರಾಂತ್ಯ, ವ್ರತ, ಪಚಿಥ ಯಾವುದೇ ಆಗಿರಲಿ ಅವನು ಮೊದಲು ಮಾನವ ಮನುಷ್ಯ ಜಾತಿ ತಾನೊಂದೆ ವಲಂ ಎಂದು ಸಾರುವ ಈ ಆಚರಣೆಗಳು ಅವನನ್ನು ಬೆಸೆಯುತ್ತಿವೆ. ಇಂತಹ ಆಚರಣೆಗಳ ಅಗತ್ಯ ಇಂದಿನ ಸಮಾಜಕ್ಕಿದೆ. ಈ ನಿಟ್ಟಿನಲ್ಲಿ ಬದಲಾಗುತ್ತಿರುವ ಗ್ರಾಮದೇವತೆಯ ಅಸ್ತಿತ್ವ ಹಾಗೂ ಗ್ರಾಮದೇವತೆ ಸ್ಥಿತ್ಯಂತರ ಕಾರಣವೇನೆಂಬುದನ್ನು ಗುರುತಿಸುವುದು ಅನಿವಾರ್ಯವಾಗಿದೆ.